ಸಿ.ಸಿ ನಂಬ್ರ: 417/2024
ಪಿ.ಡಬ್ಲ್ಯೂ : 1

ದಿನಾಂಕ: 07-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ.ಪಿ.ಕೆ.ಎಸ್. ವಕೀಲರಿಂದ

1. ನಾನು 10 -15 ವರ್ಷದಿಂದ PWD ಕಾಂಟ್ರೆಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಆದಾಯ ತೆರಿಗೆ ಪಾವತಿದಾರ. ನನಗೂ ಹಾಗೂ ಆರೋಪಿಗೂ ವ್ಯವಹಾರ ಆಗಿದ್ದು 2024 ರಲ್ಲಿ ಎಂದರೆ ಸರಿ. 10 ಲಕ್ಷ ಕೊಡಲು ಬಾಕಿ ಇದೆ ಎಂಬ ವಿಚಾರವನ್ನು ಆದಾಯ ತೆರಿಗೆ ಪಾವತಿಯಲ್ಲಿ ತೋರಿಸಿದ್ದೀರಾ ಎಂದರೆ ಸಾಕ್ಷಿ ಜನವರಿಯಲ್ಲಿ ದುಡ್ಡು ಕೊಟ್ಟಿರುತ್ತೇನೆ. ಮಾರ್ಚ್, ಎಪ್ರೀಲ್ ನಲ್ಲಿ ಹಿಂದಿರುಗಿಸುತ್ತೇನೆ ಎಂದು ಹೇಳಿದ್ದರಿಂದ ಸದರಿ ವಿಚಾರವನ್ನು ಆದಾಯ ತೆರಿಗೆ ಯಲ್ಲಿ ತೋರಿಸಿಲ್ಲ ಎಂದು ನುಡಿಯುತ್ತಾರೆ

2. ದಿನಾಂಕ 08-01-2024 ರಂದು ಹಣ ಕೊಟ್ಟಿರುತ್ತೇನೆ. ಒಂದೇ ಬಾರಿ ನಗದಾಗಿ 10 ಲಕ್ಷ ಕೊಟ್ಟಿರುತ್ತೇನೆ. 10 ಲಕ್ಷ ದೊಡ್ಡ ಮೊತ್ತ ಎಂದರೆ ಸರಿ. ಆರೋಪಿತ ಸುಮಾರು 7 -8 ವರ್ಷದಿಂದ ಪರಿಚಯ. ಒಂದೇ ಇಲಾಖೆಯಲ್ಲಿ PWD ಕಾಂಟ್ರೆಕ್ಟರ್ ಆಗಿ ಕೆಲಸ ಮಾಡಿರುತ್ತೇವೆ. ವಿಳಾಸದ ಪ್ರಕಾರ ನಮ್ಮ ಮನೆ ಹಾಲಾಡಿಯಲ್ಲಿ ಇರುತ್ತದೆ ಎಂದರೆ ಸರಿ. ಆರೋಪಿಯ ಮನೆ ಶಿವಮೊಗ್ಗ ದ ತೀರ್ಥಹಳ್ಳಿ ಎಂದರೆ ಸರಿ. 10 ಲಕ್ಷ ಹಣ ಕೊಡುವಾಗ ಯಾವುದೇ ದಾಖಲೆ ಮಾಡಿಕೊಂಡಿಲ್ಲ. ಆತ ನನಗೆ ಪರಿಚಯ ಇದ್ದುದರಿಂದ ಯಾವುದೇ ದಾಖಲೆ ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ.

3. ಬೆಂಗಳೂರಿನಲ್ಲಿ ಜನವರಿ 1 ಅಥವಾ 2 ತಾರೀಖಿನಂದು ಹಣ ಕೇಳಿದ್ದನು. ಯಾವ ಉದ್ದೇಶಕ್ಕೆ ಹಣ ಬೇಕು ಎಂದು ನನ್ನ ಬಳಿ ಹೇಳಿರುವುದಿಲ್ಲ. ನನ್ನ ಬಳಿ 10 ಲಕ್ಷ ಹಣ ಇತ್ತು. ಡಿಸೆಂಬರ್ ನಲ್ಲಿ 5 - 6 ಲಕ್ಷ ಇತ್ತು. ಉಳಿದ ಹಣವನ್ನು ಜನವರಿಯಲ್ಲಿ adjust ಮಾಡಿ ಕೊಟ್ಟಿರುತ್ತೇನೆ. ಡಿಸೆಂಬರ್ ಹಾಗೂ ಜನವರಿಯಲ್ಲಿ ಹಣವನ್ನು withdraw ಮಾಡಿದ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಆಗಾಗ ಹಣವನ್ನು withdraw ಮಾಡುತ್ತೇನೆ. ದಾಖಲೆ ಇರಬಹುದು ಎಂದು ನುಡಿಯುತ್ತಾರೆ. ನೋಟಿಸಿನಲ್ಲಿ ಹಣವನ್ನು ಯಾವಾಗ ತೆಗೆದುಕೊಂಡಿರುತ್ತಾರೆ ಎಂಬ ಬಗ್ಗೆ ನಮೂದಿಸಿರುವುದಿಲ್ಲ. ವಕೀಲರಿಗೆ ಎಲ್ಲಾ ವಿಚಾರವನ್ನು ಹೇಳಿರುತ್ತೇನೆ.

4. ದೂರಿನಲ್ಲಿ ಆರೋಪಿತ ಯಾವಾಗ ಹಣ ನನ್ನಿಂದ ಪಡೆದಿರುತ್ತಾರೆ ಎಂದು ತಿಳಿಸಿದ್ದೀರಾ ಎಂದರೆ ಸಾಕ್ಷಿ ನಾನು ಹೇಳಿರುತ್ತೇನೆ, ದೂರಿನಲ್ಲಿ ಇದ್ದ ಬಗ್ಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು 10 ಲಕ್ಷ ಕೊಡಬೇಕು ಅಂತ ಆರೋಪಿತನ ವಿರುದ್ಧ ಯಾವುದೇ ಸಿವಿಲ್ ವ್ಯಾಜ್ಯ ಸಲ್ಲಿಸಿಲ್ಲ. ಸಿವಿಲ್ ವ್ಯಾಜ್ಯವನ್ನು ಸಲ್ಲಿಸುವಾ ಉದ್ದೇಶ ಇಲ್ಲವಾಗಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಈ ಸಂದರ್ಭದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಓ.ಹೇ.ಕೇ.ಸ.ಇದೆ　　　　　　ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ